# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 70
ಸದಸ್ಯರ ಹೆಸರು : ಶ್ರೀ ವಿಜಯ್ ಸಿಂಗ್
ಉತ್ತರಿಸುವ ಸಚಿವರು : ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 09-07-2018

| | ಪ್ರಶ್ನೆ | ಉತ್ತರ |
|---|---|---|

**ಅ)** ಪ್ರಶ್ನೆ: ಹೈದ್ರಾಬಾದ್– ಕರ್ನಾಟಕ ಭಾಗದ ಬೀದರ ಜಿಲ್ಲೆಯ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಅವುಗಳ ನೇಮಕಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಉತ್ತರ:

1. ಸಾರಿಗೆ ಇಲಾಖೆಯಲ್ಲಿ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕಛೇರಿಗಳಲ್ಲಿ ಪ್ರಸ್ತುತ ಒಟ್ಟು 35 ಹುದ್ದೆಗಳು ಖಾಲಿ ಇರುತ್ತವೆ.
2. ಬೀದರ್ ಜಿಲ್ಲೆ ಸೇರಿದಂತೆ ಹೈದ್ರಾಬಾದ್–ಕರ್ನಾಟಕ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 23 ಮೋಟಾರು ವಾಹನ ನಿರೀಕ್ಷಕರುಗಳು, 14 ಪ್ರ.ದ.ಸ, 03 ಬೆರಳಚ್ಚುಗಾರರ ಮತ್ತು 24 ದ್ವಿ.ದ.ಸ, ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬೇಡಿಕೆ ಪಟ್ಟಿ ಸಲ್ಲಿಸಿದ್ದು, ನೇಮಕಾತಿ ಕುರಿತಂತೆ ಆಯೋಗವು ಅಧಿಸೂಚನೆ ಹೊರಡಿಸಿರುತ್ತದೆ.

**ಆ)** ಪ್ರಶ್ನೆ: ಬೀದರ್ ಜಿಲ್ಲೆಯಲ್ಲಿ ಬಸ್ಸುಗಳ ಕೊರತೆಯಿಂದ ನೂರಾರು ಗ್ರಾಮದಲ್ಲಿ ಬಸ್ಸು ಸಂಚರಿಸುತ್ತಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;

ಉತ್ತರ: ಬೀದರ ಜಿಲ್ಲೆಯಲ್ಲಿ ಒಟ್ಟು 667 ಗ್ರಾಮಗಳಿದ್ದು, ಈ ಪೈಕಿ 666 ಗ್ರಾಮಗಳಿಗೆ ಬಸ್ ಸೌಕರ್ಯ ಒದಗಿಸಲಾಗಿದೆ. ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಎಕಲಾಸಪುರ ಗ್ರಾಮಕ್ಕೆ ಯೋಗ್ಯ ರಸ್ತೆ ಸಂಪರ್ಕವಿಲ್ಲದ ಕಾರಣ ಬಸ್ ಸೌಕರ್ಯ ಕಲ್ಪಿಸಿರುವುದಿಲ್ಲ. ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ತಾಲ್ಲೂಕುವಾರು ಬಸ್ ಸೇವೆ ಒದಗಿಸಿದ ಮತ್ತು ಒದಗಿಸಬೇಕಾದ ಗ್ರಾಮಗಳ ವಿವರಗಳು ಈ ಕೆಳಗಿನಂತಿರುತ್ತವೆ.

| ಕ್ರ ಸಂ | ತಾಲೂಕು | ಒಟ್ಟು ಜನವಸತಿ ಗ್ರಾಮಗಳ ಸಂಖ್ಯೆ | ಬಸ್ ಸೇವೆ ಒದಗಿಸಿದ ಜನವಸತಿ ಗ್ರಾಮಗಳ ಸಂಖ್ಯೆ | ಬಸ್ ಸೇವೆ ಒದಗಿಸಬೇಕಾದ ಜನವಸತಿ ಗ್ರಾಮಗಳ ಸಂಖ್ಯೆ |
|---|---|---|---|---|
| 1 | ಬೀದರ | 151 | 151 | 0 |
| 2 | ಹುಮನಾಬಾದ | 84 | 84 | 0 |
| 3 | ಬಸವಕಲ್ಯಾಣ | 149 | 149 | 0 |
| 4 | ಭಾಲ್ಕಿ | 134 | 133 | 1 |
| 5 | ಔರಾದ | 149 | 149 | 0 |
| | **ಒಟ್ಟು** | **667** | **666** | **1** |

ಎಕಲಾಸಪುರ ಗ್ರಾಮಕ್ಕೆ ಬಸ್ ಕಾರ್ಯಾಚರಣೆಗೆ ಯೋಗ್ಯ ರಸ್ತೆ ನಿರ್ಮಿಸಿದಲ್ಲಿ ಬಸ್ ಸೇವೆ ಒದಗಿಸಲು ಕ್ರಮ ಜರುಗಿಸಲಾಗುವುದು.

ಬೀದರ ಜಿಲ್ಲೆಯ ವ್ಯಾಪ್ತಿಯ ಬೀದರ ವಿಭಾಗದಲ್ಲಿ ದಿನಾಂಕ 02.07.2018ರಂದು ಇದ್ದಂತೆ 559 ಅನುಸೂಚಿಗಳ ಕಾರ್ಯಾಚರಣೆಗೆ 612 ವಾಹನಗಳಿದ್ದು, ವಿಭಾಗದಲ್ಲಿ ವಾಹನಗಳ ಕೊರತೆ ಇರುವುದಿಲ್ಲ.

**ಇ)** ಪ್ರಶ್ನೆ: ಬೀದರ್ ಜಿಲ್ಲೆಯಲ್ಲಿ ಸಂಚರಿಸುವ ಬಸ್ಸುಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಉತ್ತರ: ಬೀದರ ಜಿಲ್ಲೆಯ ವ್ಯಾಪ್ತಿಯನ್ನೊಳಗೊಂಡ ಬೀದರ ವಿಭಾಗದಲ್ಲಿ ಒಟ್ಟು 612 ಬಸ್ಸುಗಳು ಕಾರ್ಯಾಚರಣೆಗೊಳ್ಳುತ್ತಿದ್ದು, ತಾಲ್ಲೂಕಾವಾರು ವಿವರಗಳು ಈ ಕೆಳಗಿಂತಿರುತ್ತವೆ.

| ಕ್ರ.ಸಂ. | ತಾಲ್ಲೂಕು | ಬಸ್‌ಗಳ ಸಂಖ್ಯೆ |
|---|---|---|
| 1 | ಬೀದರ | 196 |
| 2 | ಹುಮನಾಬಾದ | 111 |
| 3 | ಬಸವಕಲ್ಯಾಣ | 111 |
| 4 | ಭಾಲ್ಕಿ | 108 |
| 5 | ಔರಾದ | 86 |
| | ಒಟ್ಟು | 612 |

<table>
<tr>
<td>ಈ)</td>
<td>ಬೀದರ್ ಜಿಲ್ಲೆಯಲ್ಲಿನ ಮಿನಿ ಬಸ್ ನಿಲ್ದಾಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td>
<td>ಬೀದರ್ ಜಿಲ್ಲೆಯಲ್ಲಿ 10 ಮಿನಿ ಬಸ್ ನಿಲ್ದಾಣಗಳಿದ್ದು ವಿವರ ಈ ಕೆಳಗಿನಂತಿದೆ.
<table>
<tr><th>ಕ್ರ. ಸಂ.</th><th>ತಾಲೂಕು</th><th>ಮಿನಿ ಬಸ್ ನಿಲ್ದಾಣಗಳು</th></tr>
<tr><td>1</td><td>ಹುಮನಾಬಾದ್</td><td>(1) ಹಳ್ಳಿಖೇಡ (2) ಹುಡಗಿ</td></tr>
<tr><td>2</td><td>ಬಸವಕಲ್ಯಾಣ</td><td>(1)ಹುಲಸೂರು (2) ಮುಡಬಿ</td></tr>
<tr><td>3</td><td>ಔರಾದ್</td><td>(1)ಠಾಣಾಕುಸನೂರು (2)ಚಿಂತಕಿ (3)ಸಂತಪೂರ (4)ಮುಧೋಳ (5)ಕಮಲನಗರ</td></tr>
<tr><td>4</td><td>ಬೀದರ್</td><td>ಬಗದಲ್</td></tr>
</table>
</td>
</tr>
<tr>
<td>ಉ)</td>
<td>ನಿರ್ಮಾಣಗೊಂಡಿರುವ ಬಸ್ ನಿಲ್ದಾಣಗಳು ಉಪಯೋಗಕ್ಕೆ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?</td>
<td>ಕಮಲನಗರ ಹಾಗೂ ಹುಲಸೂರು ಬಸ್ ನಿಲ್ದಾಣಗಳು ಊರಿನ ಕೇಂದ್ರ ಸ್ಥಾನದಿಂದ ದೂರದಲ್ಲಿದ್ದು, ಹೊರಭಾಗದಲ್ಲಿರುತ್ತವೆ. ಪ್ರಯಾಣಿಕರು ಪೂರ್ಣವಾಗಿ ಬಳಕೆ ಮಾಡುತ್ತಿಲ್ಲ.<br>ಕಮಲನಗರ ಗ್ರಾಮದ ಮುಖ್ಯ ರಸ್ತೆಯಲ್ಲಿ ಶಾಸಕರ ಅನುದಾನದಲ್ಲಿ ದೊಡ್ಡದಾದ ತಂಗುದಾಣ ನಿರ್ಮಿಸಿದ್ದು, ಕಾರ್ಯಾಚರಣೆಯಲ್ಲಿದೆ.<br>ಹುಲಸೂರುನಲ್ಲಿ ಪೋಲಿಸ್ ಇಲಾಖೆಗೆ ಸೇರಿದ 8 ಎಕರೆ ನಿವೇಶನದಲ್ಲಿ 2 ಎಕರೆಯಷ್ಟು ನಿವೇಶನವನ್ನು ನೂತನ ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಪಡೆಯಲು ಹಾಗೂ ಸಂಸ್ಥೆಗೆ ಸೇರಿದ ಹಳೆ ಬಸ್ ನಿಲ್ದಾಣವನ್ನು ಕಟ್ಟಡ ಸಮೇತ ಪೋಲಿಸ ಇಲಾಖೆಗೆ ಹಸ್ತಾಂತರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಮಟ್ಟದಲ್ಲಿ ಪ್ರಕ್ರಿಯೆ ಜಾರಿಯಲ್ಲಿದೆ.</td>
</tr>
</table>

ಸಂ: ಸಾರಿಇ 85 ಸಾಸಂಪ್ರ 2018

(ಡಿ.ಸಿ. ತಮ್ಮಣ್ಣ)
ಸಾರಿಗೆ ಸಚಿವರು